# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 753 (873)
2. ಸದಸ್ಯರ ಹೆಸರು : ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 19.08.2025
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 'ಸೇಫ್ಟೀ ಬೇಸಿಕ್ ಸ್ಟ್ರಿಪ್' ನಿರ್ಮಾಣ ಮಾಡುವ ಪ್ರಸ್ತಾವನೆ ಯಾವ ಹಂತದಲ್ಲಿದೆ; | ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣವು AAI ಸಂಸ್ಥೆಯ ಒಡೆತನದಲ್ಲಿದ್ದು, ಈ ವಿಮಾನ ನಿಲ್ದಾಣದ ಕಾರ್ಯಚರಣೆ & ನಿರ್ವಹಣೆಯನ್ನು PPP ಮಾದರಿಯಲ್ಲಿ ಖಾಸಗಿ ಸಂಸ್ಥೆಗೆ ವಹಿಸಿರುತ್ತದೆ. ವಿಮಾನ ನಿಲ್ದಾಣಕ್ಕೆ ಅವಶ್ಯವಿರುವ ಭೂಸ್ವಾಧೀನ ಮತ್ತು ನಿರ್ಮಾಣ ಕಾರ್ಯವನ್ನು ಖಾಸಗಿ ಸಂಸ್ಥೆಯು ನಿರ್ವಹಿಸಬೇಕಾಗಿರುತ್ತದೆ. ಪ್ರಸ್ತುತ ವಿಮಾನ ನಿಲ್ದಾಣದ ಭೂಸ್ವಾಧೀನಕ್ಕೆ ಅಗತ್ಯವಿರುವ ಅಂದಾಜು ಪಟ್ಟಿಯನ್ನು ಜಿಲ್ಲಾಡಳಿತವು ಸಿದ್ಧಪಡಿಸಿರುತ್ತದೆ. |
| (ಆ) | ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆಗೆ ಎಷ್ಟು ಭೂಮಿ ಸ್ವಾಧೀನ ಪಡಿಸಬೇಕಾಗಿದೆ; ಭೂಮಿ ಸ್ವಾಧೀನ ಪ್ರಕ್ರಿಯೆ ಯಾವ ಹಂತದಲ್ಲಿದೆ; (ಸಂಪೂರ್ಣ ವಿವರ ನೀಡುವುದು) | ಮಂಗಳೂರು ವಿಮಾನ ನಿಲ್ದಾಣದ ಅಭಿವೃದ್ಧಿ ಕಾರ್ಯಚರಣೆಯ ರನ್-ವೇ ಬೇಸಿಕ್ ಸ್ಟ್ರಿಪ್ & RESA ಅಭಿವೃದ್ಧಿಗಾಗಿ 36 ಎಕರೆ ಜಮೀನುಗಳು ಅವಶ್ಯವಿರುವುದಾಗಿ AAI ಸಂಸ್ಥೆಯು ಸರ್ಕಾರವನ್ನು ಕೋರಿರುತ್ತದೆ. ಈ ಸಂಬಂಧ ಭೂಸ್ವಾಧೀನ ಮೊತ್ತವನ್ನು AAI ಸಂಸ್ಥೆಯ ಮುಖಾಂತರ ಭರಿಸುವಂತೆ Chairman AAI ಮತ್ತು Secretary MoCA ಗೆ ತಿಳಿಸಲಾಗಿದೆ. |
| (ಇ) | ರನ್‌ವೇ ವಿಸ್ತರಣೆ ಮತ್ತು 'ಸೇಫ್ಟೀ ಬೇಸಿಕ್ ಸ್ಟ್ರಿಪ್' ಕಾರ್ಯಗಳಿಗೆ ವೆಚ್ಚವಾಗುವ ಅನುದಾನ ಎಷ್ಟು; ಎಷ್ಟು ಅನುದಾನವನ್ನು ಈವರೆಗೆ ವೆಚ್ಚ ಮಾಡಲಾಗಿದೆ; | ರನ್ ವೇ ವಿಸ್ತರಣೆ ಮತ್ತು RESA ವಿಸ್ತರಣಾ ಕಾರ್ಯಗಳಿಗೆ ವೆಚ್ಚವಾಗುವ ಅನುದಾನವನ್ನು AAI ಸಂಸ್ಥೆಯೇ ಭರಿಸಬೇಕಾಗಿರುವುದರಿಂದ, ಸರ್ಕಾರದಲ್ಲಿ ಯಾವುದೇ ಮಾಹಿತಿ ಇರುವುದಿಲ್ಲ. |
| (ಈ) | ಸದರಿ ಕಾಮಗಾರಿಗಳನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು? | ಸದರಿ ಕಾಮಗಾರಿಗಳಿಗೆ ಅವಶ್ಯವಿರುವ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ AAI ಸಂಸ್ಥೆಯು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಿದೆ. |

ಸಂಖ್ಯೆ:ಮೂಅಇ 175 ರಾಅವಿ 2025

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ, ಸಚಿವರು